ಪೀರಿಯಡ್‌ನಲ್ಲಿದ್ದಿನಿ. ಇಂಥ ಕೇಸ್ ನೋಡ್ತಿರೋದು ಇದೇ ಮೊದಲು. ಅವರಿಗೆ ನಾಳೆ ಬೆಳಗ್ಗೆ ಬನ್ನಿ ಅಂತ ಹೇಳಿ ಕಳಿಸ್ತೀನಿ ಎಂದು ನಮ್ಮ ಎಸ್ಸೈ ಕೇಳಿದ. ಹಾಗೇ ಮಾಡು ಅಂತ ಅವನಿಗೆ ಹೇಳಿದೆ. ಬಾಡಿ ಇನ್ನೂ ಹತ್ತನ್ನೆರಡು ಗಂಟೆ ಮಾರ್ಚರಿಯಲ್ಲೇ ಇದ್ದರೆ ಏನೂ ಆಗಲ್ಲ ಎನ್ನುತ್ತ ನೋಡಯ್ಯ ನಮ್ಮ ಕಷ್ಟಗಳನ್ನ. ಹೆಜ್ಜೆ ಹೆಜ್ಜೆಗೂ ಹೊಸ ತಲೆನೋವುಗಳು ಶುರುವಾಗ್ತವೆ. ಈಗ ನಾನು ಮತ್ತೆ ರಾಯಭಾಗ ಪೊಲೀಸರಿಗೆ ಫೋನ್ ಮಾಡಿ ಸುಹಾಸನ ಬಗ್ಗೆ ಇನ್ನಷ್ಟು ಮಾಹಿತಿ ಕೊಡ್ರಪ್ಪ ಅಂತ ಗೋಗರೆಯಬೇಕು ಎನ್ನುತ್ತ ಜೀಪು ನಿಲ್ಲಿಸಿದರು. ಇಳಿದು ಸ್ವಲ್ಪ ದೂರ ಹೋಗಿ ಯಾರಿಗೋ ಫೋನ್ ಮಾಡಿದರು.

* * *

ಮರುದಿನ ಬೆಳಗ್ಗೆ ಹತ್ತರ ಹೊತ್ತಿಗೆ ರಾಜೀವ ಸ್ಟೇಷನ್ನಿಗೆ ಬಂದಾಗ ಸ್ವಲ್ಪ ದೂರದಲ್ಲಿ ಕೆಲವರು ಮಾತಾಡ್ತಾ ನಿಂತಿದ್ದರು. ಅವರ ಸನಿಹಕ್ಕೆ ಹೋಗಿ ನೀವು ಸುಹಾಸ್ ರಾನಡೆಯ ಕಡೆಯವರೇ ಎಂದು ಕೇಳಿದ. ಅವರು ಉತ್ತರಿಸದೇ ರಾಜೀವನ ಮುಖ ನೋಡಿದರು.

‘ನಂಗೆ ಸುಹಾಸನ ಪರಿಚಯ ಇತ್ತು. ನಿನ್ನೆ ವೆಂಕಟರಾವ್ ರಾನಡೆ ಅನ್ನೋರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದು ನಾನೇ. ಅವರು ನಂಗೆ ಬರೋಕಾಗಲ್ಲ’ ಅಂದರು ಎನ್ನುತ್ತಿದ್ದಂತೆ ಒಬ್ಬ ಎಚ್ಚೆತ್ತುಕೊಂಡ. ‘ಹೌದ್ರೀ ಸರ, ಸುಹಾಸ್ ಸಾವಕಾರ್ರು ನಮ್ ಧಣಿಗಳ ಮಗಾರೀ. ನಾವ್ ರಾಯಭಾಗದಿಂದ ಬಂದೇವಿ’ ಎನ್ನುತ್ತಾ ಮುಂದೆ ಬಂದ. ಐದಾರು ಜನ ಅವನ ಹಿಂದೆ ಬಂದು ನಿಂತರು. ‘ಧಣಿಗಳ ಹೊಲ, ವಾಡೆ ನಿಗಾ ನೋಡೋದು ನಾವಾ...’ ಎಂದು ಒಬ್ಬ ಹೇಳಿದ. ‘ಸುಹಾಸ ಧಣಿಗಳು ಉರುಲು ಹಾಕ್ಕೊಂಡಾರಂತ? ಏನಾಗಿತ್ರಿ ಅವ್ರಿಗೆ’ ಎಂದು ಇನ್ನೊಬ್ಬ ಸಹಜವಾಗಿ ಕೇಳಿದ.

‘ಮೀರಾಬಾಯಿ ಅನ್ನೋ ಹೆಂಗಸಿನ ಸಂಬಂಧಿಕರು ಅಂತ ಕೆಲವರು ಬಾಡಿ ಒಯ್ಯಾಕ ಬಂದಾರ್ರಿ. ಆಕೀ, ಮಾಧವರಾವ್ ಧಣಿಗಳ ಮಗಳಂತ! ಅಪ್ಪನ ಆಸ್ತಿಯಾಗ ಹಿಸ್ಸೆ ಬೇಕಂತ ಕೋರ್ಟಿಗೆ ಹೋಗ್ಯಾಳಂತ! ಖರೇ ಅಂದ್ರ ಆಕಿ ಜಾತಿ ಬ್ಯಾರೇನೇ ಐತ್ರಿ. ಅಲ್ಲೊಬ್ಬ ಕರಿ ಚೊಣ್ಣದವ ನಿಂತಾನ ನೋಡ್ರಿ. ಅವ ಮೀರಾಬಾಯಿ ಗಂಡ ಅಂತ ಹೇಳಕೋತಾನ. ಇಪ್ಪತ್ ದಿನಗಳ ಹಿಂದ ಆಕಿ ಬೆಳಗಾಂವಿ ಸರ್ಕಾರಿ ದವಾಖಾನ್ಯಾಗ ಸತ್ತಳಂತ! ಅವನ ಮಾರಿ ನೋಡಿದರ ಏನೋ ಬಾನಗಡಿ ಮಾಡಾಕ ಬಂದಾನ ಅನಸ್ತತಿ...’ ಎಂದು ಮತ್ತೊಬ್ಬ ಹೇಳಿದ.

ಒಂದೆರಡು ನಿಮಿಷಗಳು ಕಳೆಯುವಷ್ಟರಲ್ಲಿ ಕಪ್ಪು ಪ್ಯಾಂಟು ಧರಿಸಿದವನು ರಾಜೀವನ ಸಮೀಪ ಬಂದು, ‘ನಾ ಮೀರಾಬಾಯಿ ಗಂಡ. ಅಥಣಿ ತಾಲ್ಲೂಕಾ ಕಚೇರಿ ಮುಂದ ಜೆರಾಕ್ಸ್ ಅಂಗಡಿ ಇಟ್ಟುಕೊಂಡೇನ್ರಿ. ಗೋವಿಂದ ಗುರುವಾಡ ಅಂತ ನನ್ನ ಹೆಸರು. ಸುಹಾಸನ ಬಾಡಿ ಒಯ್ಯಾಕ ಬಂದೇನಿ. ನಮ್ಮ ಮಾಮಾರ ಊರವರೂ ಬಂದಾರಂತ. ನಾ ಎಂದೂ ಸುಹಾಸನ ಜೋಡಿ ಅವರನ್ನ ನೋಡಿಲ್ರಿ. ನನ್ನ ಹೆಂಡ್ತಿ ಸಾಯೂ ಮುಂದ ಸುಹಾಸನಿಗೆ ಕನ್ಯಾ ನೋಡಿ ಲಗಣ ಮಾಡೋ ಜವಾಬ್ದಾರಿ ನಿಮ್ಮದ ಅಂತ ಹೇಳಿದ್ದಳ್ರಿ. ನೀವ್ ದೇವರು ಬಂದಾಂಗ ಬಂದೀರಿ. ಪೊಲೀಸರಿಗೆ ಹೇಳಿ ಬಾಡಿ ನಂಗ ಕೊಡಿಸ್ರಿ. ಒಯ್ದು ಮಣ್ಣು ಮಾಡ್ತೀನ್ರಿ’ ಎಂದು ವಿನಂತಿ ಮಾಡಿಕೊಂಡ. ಅವನ ಜತೆಯೂ ಐದಾರು ಜನರಿದ್ದರು. ಎರಡೂ ಕಡೆಯವರ ಮಾತು ಕೇಳಿಸಿಕೊಂಡ ಮೇಲೆ ಇವರಲ್ಲಿ ಯಾರೂ ಸುಹಾಸನ ವಾರಸುದಾರರಲ್ಲ ಎಂದು ರಾಜೀವನಿಗೆ ಖಚಿತವಾಯಿತು.

‘ಸ್ವಲ್ಪ ಹೊತ್ತಿಗೆ ಸಿಐ ಸಾಹೇಬರು ಬರ್ತಾರೆ. ನೀವು ಅವರ ಜತೆ ಮಾತಾಡಿ. ಬಾಡಿ ತಗಂಡು ಹೋಗಿ ಅಂತ್ಯಕ್ರಿಯೆ ಮಾಡಿ ಮುಗಿಸಿ. ಸುಹಾಸ ಸತ್ತು ಮೂವತ್ತಾರು ಗಂಟೆಗಳಾದ್ವು. ಬಾಡಿಯನ್ನು ಮಾರ್ಚರಿಯಲ್ಲೇ ಬಿಟ್ಟರೋದು ಸರಿಯಲ್ಲ...’ ಎಂದು ಹೇಳುತ್ತಾ, ಮತ್ತೊಮ್ಮೆ ಎಲ್ಲರ ಮುಖ ನೋಡಿ ರಾಜೀವ ಸ್ಟೇಷನ್ನಿನ ಒಳಹೋದ. ಭಂಡಾರಿ ಸಾಹೇಬರು ಎರಡು ಗಂಟೆ ಹೊತ್ತಿಗೆ ಬರ್ತಾರೆ ಎನ್ನುವುದು ಗೊತ್ತಾದ ಮೇಲೆ ಮಾರ್ಚರಿ

